# ಪಿಂಕಿಯ ನೊರೆಯುಬೆಟ್ಟ

ಪಿಂಕಿಯು ಮೊದಲಬಾರಿ ತಾನೇ ಸ್ನಾನ ಮಾಡಿಕೊಳ್ಳುತ್ತಿದ್ದಳು. ಯಾವಾಗಲು ಬೆಳಗ್ಗೆ ಅಮ್ಮನೇ ಪಿಂಕಿಗೆ ಸ್ನಾನ ಮಾಡಿಸುತ್ತಿದ್ದಳು. ಅಂದು ಪಿಂಕಿ "ಅಮ್ಮಾ, ಇಂದು ನಾನೆ ಸ್ನಾನ ಮಾಡಿಕೊಂಡು ಬರುತ್ತೇನೆ" ಎಂದಾಗ ಅಮ್ಮನಿಗೆ ಆಶ್ಚರ್ಯವೋ ಆಶ್ಚರ್ಯ. ಸ್ನಾನ ಮಾಡುವಾಗ ಬೇಬಿ ಸಾಬೂನಿನಿಂದ ಉಜ್ಜಿಉಜ್ಜಿ ದೊಡ್ಡ ನೊರೆಯುಬೆಟ್ಟವನ್ನೇ ಕಟ್ಟಿಬಿಟ್ಟಿದ್ದಳು. ಅದನ್ನು ನೋಡಿ ಆನಂದದಿಂದ ಸಾಬೂನಿನ ಮೇಲೆ ಇನ್ನಷ್ಟು ನೀರನ್ನು ಹಾಕಿ ಇನ್ನೂ ಜೋರಾಗಿ ಉಜ್ಜಿದಳು. ಉಜ್ಜಿದಷ್ಟು ದಪ್ಪದಪ್ಪ ಗುಳ್ಳೆಗಳ ನೊರೆ ಬುರುಬುರುಬುರು ಎಂದು ಪಿಂಕಿಯ ಮೈಯ್ಯನ್ನೆಲ್ಲ ತುಂಬಿಕೊಂಡುಬಿಟ್ಟಿತು. ಅಷ್ಟರಲ್ಲಿ ಒಂದು ದೊಡ್ಡಗುಳ್ಳೆಯು ಮೆಲ್ಲನೆ ಮೇಲಕ್ಕೆ ಏರತೊಡಗಿತು.

ಪಿಂಕಿ ಅದನ್ನು ನೋಡಿ ಕೇಕೆ ಹಾಕಿದಳು. ಆ ಕೇಕೆಯ ಧ್ವನಿಗೆ ಆ ದಪ್ಪಗುಳ್ಳೆಯು ತನ್ನಷ್ಟಕ್ಕೆ ತಿರುಗಲು ಪ್ರಾರಂಭವಾಯಿತು. ಆ ಗುಳ್ಳೆಯ ಮೇಲೆ ಕಾಮನಬಿಲ್ಲಿನ ಬಣ್ಣಗಳು ಕಾಣಿಸಿಕೊಂಡವು. ಅದು ಇನ್ನಷ್ಟು ದೊಡ್ಡದಾಯಿತು. ಆಗ ಕನ್ನಡಿಯಂತೆ ಆ ಕೋಣೆಯಲ್ಲಿದ್ದ ಎಲ್ಲ ವಸ್ತುಗಳನ್ನು ಅದು ತೋರಿಸಿತು. ಅದರಲ್ಲಿ ಮತ್ತೊಂದು ಪಿಂಕಿಯನ್ನು ನೋಡಿ ಈ ಪಿಂಕಿ ಜೋರಾಗಿ ಚಪ್ಪಾಳೆ ತಟ್ಟಿದಳು.

ಆ ಚಪ್ಪಾಳೆಯಿಂದ ಬಂದ ಗಾಳಿಗೆ ಆ ಸಾಬೂನಿನ ಗುಳ್ಳೆ ಮತ್ತಷ್ಟು ಮೇಲೆ ಹೋಯಿತು. ಸುಂದರವಾದ ಬಣ್ಣಬಣ್ಣದ ದೊಡ್ಡಗುಳ್ಳೆ ಕಿಟಕಿಯಿಂದ ಆಚೆ ಹೋಗಲು ಅಣಿಯಾಯಿತು. ಪಿಂಕಿಗೆ ಅದನ್ನು ತನ್ನ ಬಳಿಯೇ ಇಟ್ಟುಕೊಳ್ಳಬೇಕೆಂದು ಆಸೆಯಾಯಿತು. ತನ್ನ ಕೈಗಳಲ್ಲಿ ಸಾಬೂನನ್ನು ಬಿಗಿಯಾಗಿ ಹಿಡಿದುಕೊಂಡು ತಾನು ಕಟ್ಟಿದ್ದ ಬಿಳಿನೊರೆಯ ಬೆಟ್ಟವನ್ನು ಹತ್ತಲು ಪ್ರಾರಂಭಿಸಿದಳು.

ಬಿಳಿನೊರೆಯ ಬೆಟ್ಟದ ತುದಿಗೆ ಹತ್ತಿ ದಪ್ಪಗುಳ್ಳೆಯನ್ನು ಹಿಡಿಯಲು ಪಿಂಕಿ ಕೈ ಚಾಚಿದಳು. ಆಗ ಪಿಂಕಿಯ ಕೈಯಲ್ಲಿದ್ದ ಸಾಬೂನು ಹಾರಿ, ಕಿಟಕಿಯಿಂದ ಹೊರಗೆ ಜಿಗಿಯಿತು. ಅದನ್ನು ಹಿಡಿಯಲು ಪಿಂಕಿ ಕೂಡ ದೊಡ್ಡಗುಳ್ಳೆಯನ್ನು ಹಿಡಿದುಕೊಂಡು ಕಿಟಕಿಯಿಂದ ಆಚೆಗೆ ಹಾರಿದಳು. ಸಾಬೂನು ಪಿಂಕಿಯ ಕೈಗೆ ಸಿಕ್ಕದೆ ರಸ್ತೆಯಲ್ಲಿ ಓಡತೊಡಗಿತು.



ಅದು ಹೋಗಿ ಒಂದು ಬಟ್ಟೆಯ ಅಂಗಡಿಯ ಮುಂದೆ ನಿಂತುಕೊಂಡಿತು. ಅಷ್ಟರಲ್ಲಿ ಅಲ್ಲಿಗೆ ಬಂದ ಪಿಂಕಿಗೆ ಆ ಅಂಗಡಿಯವನು "ಪಿಂಕಿ, ನಿನಗೆ ಹೊಸ ಫ್ರಾಕ್ ಬಂದಿದೆ. ತೆಗೆದುಕೋ" ಎಂದು ಅವಳಿಗೆ ಅದನ್ನು ತೊಡಿಸಿದ. ಪಿಂಕಿಗೆ ಖುಷಿಯಾಯಿತು.

ಅನಂತರ ಸಾಬೂನು ಓಡಿಹೋಗಿ ಬೇಕರಿಯ ಮುಂದೆ ನಿಂತಿತು. ಅಲ್ಲಿಗೆ ಬಂದ ಪಿಂಕಿಗೆ ಬೇಕರಿಯವನು "ನಿನಗೆ ಓಡಿಓಡಿ ಆಯಾಸವಾಗಿದೆ. ಬಿಸಿಬಿಸಿ ಬನ್ ತಿನ್ನು" ಎಂದು ಒಂದು ಬನ್ ಕೊಟ್ಟ. ಅದನ್ನು ತಿಂದಮೇಲೆ ಪಿಂಕಿಗೆ ಶಕ್ತಿ ಬಂತು.

ಸಾಬೂನನ್ನು ಹಿಡಿಯಲು ಮತ್ತೆ ಓಡತೊಡಗಿದಳು. ಈಗ ಸಾಬೂನು ಹಿಂದಿರುಗಿ ಮನೆಯ ಕಡೆ ಓಡಿತು. ಮನೆಯ ಹತ್ತಿರ ಬರುತ್ತಿದ್ದಂತೆ ಎಗರಿ, ಕಿಟಕಿಯಿಂದ ತೂರಿ, ಮನೆಯೊಳಗೆ ಬಂದುಬಿಟ್ಟಿತು. ಪಿಂಕಿಯೂ ಮೇಲೆಕ್ಕೆ ಹಾರಿದಳು. ಅಲ್ಲೇ ಇದ್ದ ದೊಡ್ಡಗುಳ್ಳೆಯು ಅವಳನ್ನು ಹಿಡಿದು, ಕಿಟಕಿಯೊಳಗೆ ತೂರಿಸಿ ನೊರೆಯುಬೆಟ್ಟದ ಮೇಲೆ ಹಾಕಿಬಿಟ್ಟಿತು. ಪಿಂಕಿಯು ಅಲ್ಲೇ ಇದ್ದ ಸಾಬೂನನ್ನು ಗಬಕ್ಕನೆ ಹಿಡಿದು "ಸಿಕ್ಕಿತು... ಸಿಕ್ಕಿತು..." ಎಂದು ಜೋರಾಗಿ ಕೂಗಿದಳು.

"ಪಿಂಕಿ! ಏನು ಸಿಕ್ತು...?" ಎಂದು ಅಮ್ಮ ಪಿಂಕಿಯನ್ನು ಎಬ್ಬಿಸುತ್ತಾ ಕೇಳಿದರು.

ಪಿಂಕಿ ಪಿಳಿಪಿಳಿ ಕಣ್ಣುಬಿಡುತ್ತಾ "ಅಮ್ಮ ಏನಾಯ್ತು ಗೊತ್ತಾ! ..." ಎಂದು ತನಗೆ ಬಿದ್ದ ಕನಸನ್ನು ಅಮ್ಮನಿಗೆ ಹೇಳಿದಳು. ●